ಸಾರ್ವಜನಿಕ ಶಿಕ್ಷಣ ಇಲಾಖೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂಖ್ಯೆ: ಅ೩(1)/745೩/ಹಿ.ಪ್ರಾ.ಶಾ.ಮಾ.ನವೀ-40/20-21 ದಿನಾಂಕ: 13.11.2020

ಕರ್ನಾಟಕ ಶಿಕ್ಷಣ ಕಾಯ್ದೆ ಅನ್ವಯ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ಮಾನ್ಯತೆ ಪ್ರಮಾಣ ಪತ್ರ

(ನಮೂನೆ-3 (ನಿಯಮ-7)

***ಕ್ರಮ ಸಂಖ್ಯೆ: 06/2020-21***

ಅಲ್-ತಾಹಿಬ್ ಶಿಕ್ಷಣ ಟ್ರಸ್ಟ್, ಕಟ್ಟಿಗೇನಹಳ್ಳಿ, ಹೊಸಕೋಟೆ ತಾಲ್ಲೂಕು. ಈ ಆಡಳಿತ ಮಂಡಳಿಯವರ ಆಶ್ರಯದಲ್ಲಿ ನಡೆಸುತ್ತಿರುವ ಇಂಡೋ ಸನ್‌ರೈಸ್ ಇಂಟರ್ ನ್ಯಾಷನಲ್ ಶಾಲೆ (ಹಿಂದಿನ ಹೆಸರು ಅಲ್‌ತಾಹಿಬ್ ಪ್ರಾಥಮಿಕ ಶಾಲೆ) ಕಟ್ಟಿಗೇನಹಳ್ಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಈ ಶಾಲೆಗೆ ಶಾಲಾ ಹೆಸರು ಬದಲಾವಣೆ ಆದೇಶವಾಗಿರುವಂತೆ 1-8ನೇ ತರಗತಿಗೆ ಆಂಗ್ಲ ಮಾಧ್ಯಮದಲ್ಲಿ ಶಾಶ್ವತ ಅನುದಾನ ರಹಿತವಾಗಿ ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆಗೊಳಪಟ್ಟು ಕರ್ನಾಟಕ ಶಿಕ್ಷಣ ಕಾಯಿದೆ ನಿಯಮ: 36-6(ಬಿ) ಯಂತೆ ಮಾನ್ಯತೆಯನ್ನು ನವೀಕರಿಸಿದೆ.

| ಕ್ರ. ಸಂ | ಶಾಲೆಯ ಹೆಸರು | ಮಾನ್ಯತೆ ನೀಡಿದ ವರ್ಷ ಹಾಗೂ ಮಾಧ್ಯಮ | ಮಾನ್ಯತೆ ನೀಡಿದ ತರಗತಿ/ವಿಭಾಗಗಳು | ಶಾಲೆಯು ಯಾವ ವರ್ಗಕ್ಕೆ ಸೇರಿದೆ | ಶಾಲೆಯ ಮಾನ್ಯತೆ ಬಗ್ಗೆ ಪರಿಶೀಲಿಸಿದ ಪರಿಶೀಲನಾಧಿಕಾರಿ ಹೆಸರು |
|---|---|---|---|---|---|
| 01 | ಇಂಡೋ ಸನ್‌ರೈಸ್ ಇಂಟರ್ ನ್ಯಾಷನಲ್ ಪ್ರಾಥಮಿಕ ಶಾಲೆ. ಕಟ್ಟಿಗೇನಹಳ್ಳಿ, ಹೊಸಕೋಟೆ ತಾ. | 2020-21 ರಿಂದ 2022-23 ವರೆಗೆ ಮಾನ್ಯತೆ ನವೀಕರಣ ಆಂಗ್ಲ ಮಾಧ್ಯಮ (೦3 ವರ್ಷಗಳಿಗೆ) | 01 ರಿಂದ 08ನೇ ತರಗತಿ ತಲಾ ಒಂದು ವಿಭಾಗದಂತೆ ಮಾನ್ಯತೆ ನವೀಕರಣ (ಆಂಗ್ಲ ಮಾಧ್ಯಮ) | ಸಾಮಾನ್ಯ | ಕ್ಷೇತ್ರಶಿಕ್ಷಣಾಧಿಕಾರಿಗಳು ಹೊಸಕೋಟೆ ತಾಲ್ಲೂಕು |

ಷರತ್ತುಗಳು:

1. ಕರ್ನಾಟಕ ಶಿಕ್ಷಣ ಸಂಹಿತೆ ಮತ್ತು ಅನುದಾನ ಸಂಹಿತೆಯ ಎಲ್ಲಾ ನಿಯಮಗಳನ್ನು ಹಾಗೂ ಸರ್ಕಾರದ ಹಾಗೂ ಇಲಾಖೆಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 59 ವಿವಿಧ 99 ದಿನಾಂಕ: 2.2.2000 ರಂತೆ ಶಾಲೆಯ ಸಿಬ್ಬಂದಿ ರಚನೆ ಇರಬೇಕು.
3. ಶಾಲೆಗೆ ಅಗತ್ಯವಾದ ಪೀಠೋಪಕರಣ, ಪಾಠೋಪಕರಣ ಹಾಗೂ ಕನಿಷ್ಠ ಮೂಲಭೂತ ಸೌಲಭ್ಯ ಒದಗಿಸಬೇಕು.
4. ಶಾಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ ಇಡಿ 59 ವಿವಿಧ 99 ದಿನಾಂಕ: 2.2.2000 ಅನುಚ್ಛೇದ 4 ನಿಯಮ 3 ರಂತೆ ವಿದ್ಯಾರ್ಥಿಗಳ ದಾಖಲಾತಿ / ಹಾಜರಾತಿ ಇರುವಂತೆ ಪಾಲಿಸುವುದು.
5. ಶಿಕ್ಷಣ ಹಕ್ಕು ಕಾಯಿದೆ 2009ರ ಎಲ್ಲಾ ನಿಯಮಗಳನ್ನು ಅನ್ವಯಿಸಿಕೊಂಡು ಅನುಷ್ಠಾನಗೊಳಿಸುವುದು.
6. ಮಾನ್ಯ ಆಯುಕ್ತರು ಸಾ.ಶಿ.ಇ. ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಸಿ(7)(2).ಪ್ರಾಶಿಅ./ಶಾ.ಮ.ಲೈ.ಶಿ.40/14-15 ದಿನಾಂಕ:23-07-2014 ರಂತೆ ವಿದ್ಯಾರ್ಥಿಗಳ ಮೇಲಿನ ದೈಹಿಕ, ಮಾನಸಿಕ ಹಾಗೂ ಲೈಂಗಿಕ ಅತ್ಯಾಚಾರ ತಡೆಯುವ ಬಗೆಗಿನ ಎಲ್ಲಾ ಕ್ರಮಗಳನ್ನು ಅನುಸರಿಸುವುದು.
7. ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರುಪಡಿಸುವುದು.
8. ಇಲಾಖೆಯ ಪೂರ್ವಾನುಮತಿ ಪಡೆಯದೇ ಹೆಚ್ಚಿನ ವಿಭಾಗಗಳನ್ನು ತೆರೆಯಬಾರದು.
9. ಹಿಂದಿನ ಸಾಲಿನವರೆಗೆ ಲೆಕ್ಕ ಪತ್ರಗಳನ್ನು ನೊಂದಣಾಧಿಕಾರಿಗಳಿಗೆ ಸಲ್ಲಿಸಿದ ಸ್ವೀಕೃತಿ ಹಾಗೂ ನೋಂದಾಣಾಧಿಕಾರಿಗಳಿಂದ ಅನುಮೋದಿತ ಆಡಳಿತ ಮಂಡಳಿ ಸದಸ್ಯರ ಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.
10. ಕರ್ನಾಟಕ ಶಿಕ್ಷಣ ಸಂಹಿತೆ ನಿಯಮಗಳಂತೆ ಸ್ಥಿರ ನಿಧಿ ಇಟ್ಟು ಕಾಲಕಾಲಕ್ಕೆ ನವೀಕರಿಸಬೇಕು.
11. ಶಾಲೆಯಲ್ಲಿ ಇಲಾಖೆ ನೀಡಿದ ಅನುಮತಿಯಂತೆ ಪಠ್ಯ ವಸ್ತುವನ್ನೇ ಬೋಧಿಸಬೇಕು.
12. ಶಾಲೆಯಲ್ಲಿ ಬಾಲಕ /ಬಾಲಕಿಯರಿಗೆ ಪ್ರತ್ಯೇಕವಾಗಿ ಶೌಚಾಲಯ ವ್ಯವಸ್ಥೆ ಒದಗಿಸುವುದು.
13. ಸಾರಿಗೆ ಸುರಕ್ಷತಾ ಕ್ರಮಗಳನ್ನು ಆದೇಶದ ಸಂ.ಡಿಸಿಆರ್ಪಿ/ಬಿಡಿ/156/14, ದಿ: 14-8-2014 ರಂತೆ ಕ್ರಮವಹಿಸುವುದು.
14. ಒಂದು ವೇಳೆ ಆಡಳಿತ ಮಂಡಳಿ ವಿದ್ಯಾರ್ಹತೆ ಹೊಂದದ ಶಿಕ್ಷಕರನ್ನು ನೇಮಿಸದೆ ಮಕ್ಕಳ ಕಲಿಕೆಗೆ ವಂಚನೆ ಆದರೆ ಮಾನ್ಯತೆ ವಾಪಸ್ ತೆಗೆದುಕೊಳ್ಳಲಾಗುವುದು
15. ಮಾನ್ಯ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ ) ರವರ ಪತ್ರದ ಸಂಖ್ಯೆ ಎಂ.ಡಿ.ಎ೦2/ಮ.ಸು./20/2007-08 ದಿ:10-12-2009 ರಂತೆ ಮಕ್ಕಳಿಗೆ ಮತ್ತು ಶಾಲಾ ಕಟ್ಟಡಕ್ಕೆ ಅಗತ್ಯ ಸುರಕ್ಷತೆಯನ್ನು ಕಲ್ಪಿಸತಕ್ಕದ್ದು.

ಪುಟ-2 ಕ್ಕೆ...

16. ಸೇವಾ ಭದ್ರತೆ ನಿಯಮಗಳಂತೆ ಎಲ್ಲಾ ನೌಕರರಿಗೆ ಬ್ಯಾಂಕ್ ಖಾತೆ ಮೂಲಕ ವೇತನ ನೀಡುವುದು ಮತ್ತು ಸೇವಾ ಪುಸ್ತಕಗಳನ್ನು ತೆರೆದು ನಿರ್ವಹಿಸುವುದು.

17. ಮಾನ್ಯ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ ) ರವರ ಪತ್ರದ ಸಂಖ್ಯೆ ಸಿ7(4) ಪ್ರಾ.ಶಿ.ಅನುಮಾನ್ಯತೆ 09/2011-12 ದಿ:29-11-2011ರ ಆದೇಶ ಹಾಗೂ ಉಪ ನಿರ್ದೇಶಕರು (ಆಡಳಿತ) ಲೆ.ಪ.1 ಆ.ಶಾ.ಮಾ.ನ 10/2010-11 /3487 ದಿ: 07/01/2010ರ ಆದೇಶದ ಪ್ರಕಾರ ದಾಖಲಾತಿ ಹಾಜರಾತಿ ಉತ್ತಮ ಪಡಿಸಿಕೊಳ್ಳುವ ಷರತ್ತಿಗೆ ಮತ್ತು ಕರ್ನಾಟಕ ಶಿಕ್ಷಣ ಕಾಯಿದೆ ಸಂಹಿತೆ ಎಲ್ಲಾ ನಿಯಮಗಳಿಗೆ ಒಳಪಟ್ಟು ಮಾನ್ಯತೆ ನವೀಕರಿಸಿದೆ

18. ಆಡಳಿತ ಮಂಡಳಿಯವರು ಶಿಕ್ಷಣ ಕಾಯಿದೆಯನ್ವಯ ಮಾನ್ಯತೆ ನವೀಕರಣವನ್ನು ಆಯಾ ಕಾಲಕ್ಕೆ ಸರಿಯಾಗಿ ನವೀಕರಿಸಿಕೊಳ್ಳಲು ತಿಳಿಸಿದೆ. ಈ ಹಿಂದಿನಂತೆ ಯಾವುದೇ ಕಾರಣಕ್ಕಾಗಿ ದೀರ್ಘಕಾಲದವರೆಗೆ ಮಾನ್ಯತೆ ನವೀಕರಿಸದೇ ಇದ್ದಲ್ಲಿ ಶಾಲೆಯನ್ನು ಅನಧಿಕೃತ ಶಾಲೆಯೆಂದು ಘೋಷಿಲಾಗುವುದು ಎಂಬ ಷರತ್ತಿನಂತೆ ಪ್ರಥಮ ಮಾನ್ಯತೆ ಮತ್ತು ಮಾನ್ಯತೆ ನವೀಕರಿಸಿದೆ.

19. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಸುತ್ತೋಲೆ ಪತ್ರ ಸಂಖ್ಯೆ- ಸಿ7/(2)ಪ್ರಾಶಿಅ/ಇತರೆ/135/2014-15 ದಿನಾಂಕ-13-04-2015ರಲ್ಲಿ ತಿಳಿಸಿರುವಂತೆ ಶಾಲೆಯ ಮುಂದೆ 6★10 ಅಡಿ ಅಳತೆಯ ಬೋರ್ಡಿನಲ್ಲಿ ಶಾಲಾವಿವರಗಳನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು.

20. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಸುತ್ತೋಲೆ ಪತ್ರ ಸಂಖ್ಯೆ- ಸಿ7/(8)ಆರ್.ಟಿ.ಇ./ಪ್ರ.ಪ್ರ./2017-18 ದಿನಾಂಕ-02-05-2017ರಲ್ಲಿ ತಿಳಿಸಿರುವಂತೆ ಶಿಕ್ಷಣ ಹಕ್ಕು ಕಾಯಿದೆ ಅಡಿ 12(1)(ಸಿ) ಅಡಿ ದಾಖಲಾಗುವ ಮಕ್ಕಳಿಂದ ಪಠ್ಯಪುಸ್ತಕ. ನೋಟ್ ಪುಸ್ತಕ. ಸಮವಸ್ತ್ರ. ಇತ್ಯಾದಿ ಸಾಮಗ್ರಿಗಳನ್ನು ಒದಗಿಸುತ್ತೇವೆ. ಎಂದು ಅಂತಹ ಮಕ್ಕಳಿಂದ ಯಾವುದೇ ಶುಲ್ಕವನ್ನು ಸಂಗ್ರಹಿಸುವಂತಿಲ್ಲ.

ಕ್ಷೇತ್ರ ಶಿಕ್ಷಣಾಧಿಕಾರಿಗಳು,
ಹೊಸಕೋಟೆ ತಾಲ್ಲೂಕು.

...ರ್ಯದರ್ಶಿಗಳು, ಅಲ್-ತಾಹಿರ್ ಶಿಕ್ಷಣ ಟ್ರಸ್ಟ್, ಕಟ್ಟಿಗೇನಹಳ್ಳಿ, ಹೊಸಕೋಟೆ ತಾಲ್ಲೂಕು.
...ಖ್ಯೋಪಾಧ್ಯಾಯರು, ಇಂಡೋ ಸನ್‌ರೈಸ್ ಇಂಟರ್ ನ್ಯಾಷನಲ್ ಶಾಲೆ, ಕಟ್ಟಿಗೇನಹಳ್ಳಿ, ಹೊಸಕೋಟೆ ತಾಲ್ಲೂಕು.
...ರಿ ಪ್ರತಿ